ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 3, Nov-Dec 2020, 87-93
©*IIMRD*, Mysuru

IIMRD JOURNALS
www.iimrd.com

# ಪ್ರವಾಸಿ ಕೇಂದ್ರವಾಗಿ ವಾಣಿ ವಿಲಾಸ ಜಲಾಶಯ: ಒಂದು ಅಧ್ಯಯನ

**ಮಮತ. ಜಿ.ಪಿ[*] ಮತ್ತು ಡಾ. ನಾಗರತ್ನಮ್ಮ ಎಸ್[**]**

**ಪೀಠಿಕೆ**

ಪ್ರವಾಸೋದ್ಯಮ ಎಂಬುದು ಇತ್ತೀಚಿನ ದಿನಗಳಲ್ಲಿ ಒಂದು ಬೃಹತ್ ಉದ್ಯಮವಾಗಿ ಬೆಳೆಯುತ್ತಿದೆ. ವಿಶ್ವದಲ್ಲಿ ಸಿಂಗಪೂರ್, ಥೈಲ್ಯಾಂಡ್, ಮಲೇಶಿಯಾ ಇಂತಹ ದೇಶಗಳು ಪ್ರವಾಸೋದ್ಯಮದಿಂದಲೇ ಅಭಿವೃದ್ಧಿಯ ಸಾಲಿನಲ್ಲಿ ನಿಂತಿವೆ. ಪ್ರವಾಸೋದ್ಯಮ ಆಕರ್ಷಣೆಗಳಲ್ಲಿ ಧಾರ್ಮಿಕ ಮತ್ತು ಸಾಂಸ್ಕೃತಿಕ ನೆಲೆಗಳು, ಗಿರಿಧಾಮಗಳು, ಪ್ರಾಕೃತಿಕ/ನೈಸರ್ಗಿಕ ತಾಣಗಳು ಹಾಗೂ ಜಲಾಶಯಗಳು ಸೇರಿವೆ. ಪ್ರಸ್ತುತ ಲೇಖನದಲ್ಲಿ ಪ್ರವಾಸಿ ಕೇಂದ್ರವಾಗಿರುವ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ವಾಣಿವಿಲಾಸ ಸಾಗರ ಜಲಾಶಯದ ಬಗ್ಗೆ ವಿವರಿಸಲಾಗಿದೆ.

ಈ ಸೃಷ್ಠಿಯಲ್ಲಿ ನೀರು ಪವಿತ್ರವಾದ ಸ್ಥಾನವನ್ನು ಪಡೆದುಕೊಂಡಿದೆ. ನೀರು ಇಲ್ಲದೆ ನಮ್ಮ ದೈನಂದಿನ ಜೀವನವೇ ನಡೆಯುವುದಿಲ್ಲ. ಹೀಗಾಗಿ ಕರ್ನಾಟಕದಲ್ಲಿ ತುಂಗಭದ್ರಾ ಜಲಾಶಯ, ಕೃಷ್ಣರಾಜಸಾಗರ ಜಲಾಶಯ, ಹೇಮಾವತಿ ಕಣ್ವ ಜಲಾಶಯ, ಆಲಮಟ್ಟಿ ಜಲಾಶಯ ಮತ್ತು ವಾಣಿವಿಲಾಸ ಜಲಾಶಯ ಇಂತಹ ಪ್ರಮುಖ ಜಲಾಶಯಗಳನ್ನು ಕಾಣಬಹುದು. ನೀರನ್ನು ಗಂಗೆ, ಗಂಗಾಮಾತೆ ಎಂದು ದೈವಿ ಭಾವನೆಯಿಂದ ಕರೆಯಲಾಗುತ್ತದೆ. ಮಹಾದಾನಗಳಾದ ಅನ್ನದಾನ, ವಿದ್ಯಾದಾನ ಜೊತೆಗೆ ಜಲದಾನವು ಒಂದು. ಹಿಂದೂ ಧರ್ಮದಲ್ಲಿ ಜಲದಾನಕ್ಕೆ ಹೆಚ್ಚು ಮಹತ್ವವಿದೆ. ಆದ್ದರಿಂದಲೇ ರಾಜ ಮಹಾರಾಜರು, ರಾಣಿಯರು, ಮಂತ್ರಿಗಳು, ದಂಡನಾಯಕರು, ಕೆರೆ, ಬಾವಿಗಳನ್ನು ನಿರ್ಮಿಸುತ್ತಿದ್ದು ಜನಕಲ್ಯಾಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದ್ದರು. ಅದರಲ್ಲೂ ವಿಶೇಷವಾಗಿ ಬೇಸಿಗೆ, ಬರಗಾಲಗಳಲ್ಲಿ ಕುಡಿಯುವ ನೀರಿಗಾಗಿ, ಕೃಷಿಗಾಗಿ, ಕೆರೆ, ಬಾವಿ, ಜಲಾಶಯಗಳನ್ನು ನಿರ್ಮಿಸಲಾಗುತ್ತಿತ್ತು. ಒಂದು ರಾಜ್ಯದಲ್ಲಿ ಒಬ್ಬ ರಾಜ ಎಷ್ಟು ಕೆರೆಗಳನ್ನು, ಬಾವಿಗಳನ್ನು ನಿರ್ಮಿಸಿದ ಎಂಬುದು ಅವರ ಮಹತ್ ಕಾರ್ಯಗಳಲ್ಲಿ ಒಂದಾಗಿ ಪರಿಗಣಿಸಲಾಗುತ್ತಿತ್ತು. ಈ ಮಹತ್ ಕಾರ್ಯಗಳ ಹಿಂದೆ ಸಾಕಷ್ಟು ಜನರ ಪರಿಶ್ರಮವಿತ್ತು.

ರಾಜ್ಯವನ್ನಾಳಿದ ಬಹುತೇಕ ಮಹಾರಾಜರು ಅದರಲ್ಲೂ ಮೈಸೂರಿನ ಅರಸರು ಹಲವಾರು ಕೆರೆ, ಬಾವಿ, ಕಾಲುವೆ, ಜಲಾಶಯಗಳ ನಿರ್ಮಾಣ ಮಾಡಿ, ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗೆ ಶ್ರಮಿಸಿ ಮಾದರಿ ರಾಜ್ಯದ ನಿರ್ಮಾತೃಗಳು ಎಂಬ ಅಭಿದಾನಕ್ಕೆ ಪಾತ್ರರಾಗಿದ್ದಾರೆ.

---

[*] *ಸಂಶೋಧನಾ ವಿದ್ಯಾರ್ಥಿನಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.*

[**] *ಮುಖ್ಯಸ್ಥರು ಮತ್ತು ಮಾರ್ಗದರ್ಶಕರು, ಇತಿಹಾಸ ವಿಭಾಗ, ಬೆಂಗಳೂರು ವಿಶ್ವ ವಿದ್ಯಾಲಯ, ಬೆಂಗಳೂರು.*

**ವಾಣಿವಿಲಾಸ ಸಾಗರ ಜಲಾಶಯ**

ತಾಯಿಯವರಾದ ಮಹಾರಾಣಿ ಕೆಂಪನಂಜಮ್ಮಣ್ಣಿಯವರು 1895–1902 ರವರರೆಗೆ ರಾಜ್ಯದ ಆಡಳಿತ ನೋಡಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲೆಯಾದ್ಯಂತ ಭಯಾನಕ, ಭೀಕರವಾದ ಬರಗಾಲ ಉಂಟಾಯಿತು. ಇದನ್ನು ತಿಳಿದ ಕೆಂಪನಂಜಮ್ಮಣ್ಣಿ ಈ ಪ್ರದೇಶಕ್ಕೆ ನೀರಾವರಿ ವ್ಯವಸ್ಥೆ ಮಾಡುವ ಉದ್ಧೇಶದಿಂದ ಹಿರಿಯೂರು ತಾಲ್ಲೂಕಿನ ಮಾರಿಕಣಿವೆಯನ್ನು ಆಯ್ಕೆ ಮಾಡಿಕೊಂಡರು. ಮಾರಿಕಣಿವೆ ಕೆರೆಯಲ್ಲಿ ವೇದಾವತಿ ನದಿಗೆ ಆಗ ಅಣೆಕಟ್ಟನ್ನು ಕಟ್ಟಲು ನಿರ್ಧಾರ ಮಾಡಲಾಯಿತು. ಆಗ ಮಹಾರಾಣಿ ಮಾರಿಕಣಿವೆಗೆ ವಾಣಿವಿಲಾಸ ಎಂದು ಹೆಸರಿಡಲು ನಿರ್ಧರಿಸಿ, ಮಾರಿಕಣಿವೆ ಗ್ರಾಮಕ್ಕೆ ಅಧಿಕೃತವಾಗಿ ವಾಣಿವಿಲಾಸಪುರ ಎಂತಲೂ, ಮಾರಿಕಣಿವೆ ಕೆರೆಯನ್ನು 'ವಾಣಿವಿಲಾಸ ಸಾಗರ' ವೆಂದು ನಾಮಕರಣ ಮಾಡಿದರು. ಅಂದಿನಿಂದ ಇಂದಿನವರೆಗೂ ಮಾರಿಕಣಿವೆ ವಿ.ವಿ.ಸಾಗರವೆಂದು ಪ್ರಸಿದ್ಧಿಗೆ ಬಂದಿತು.

ಚಿತ್ರದುರ್ಗ ಜಿಲ್ಲೆಯಲ್ಲಿಯೇ ಒಂದೇ ನೀರಿನ ನೆಲೆಯಾಗಿರುವ ವಾನಿ–ವಿಲಾಸ ಸಾಗರ ಜಲಾಶಯ ಅಂದು–ಇಂದು ಚಿತ್ರದುರ್ಗ ಮತ್ತು ಹಿರಿಯೂರು ತಾಲ್ಲೂಕಿನ ಜನರ ಜೀವನಾಡಿಯಾಗಿದೆ. ಮೈಸೂರು ಒಡೆಯರ ಸಹಕಾರದಿಮದ ನಿರ್ಮಾಣಗೊಂಡ ಈ ಜಲಾಶಯ ಕುಡಿಯುವ ನೀರಿಗೆ, ನೀರಾವರಿಗೆ, ಕೃಷಿಗೆ ಹಾಗೂ ಅಂತರ್ಜಲಕ್ಕೆ ಆಸರೆಯಾಗಿದೆ.

**ವಾಣಿವಿಲಾಸ ಜಲಾಶಯದ ಹಿನ್ನೆಲೆ**

ಮಾರಿಕಣಿವೆ ಕೆರೆಗೆ ನೂರಾರು ವರ್ಷಗಳ ಇತಿಹಾಸವಿದೆ. ಇದರ ನಿರ್ಮಾಣ ಆರಂಭವಾಗುವ ಸಂದರ್ಭಕ್ಕೆ ಹಲವು ಬಾರಿ ತಜ್ಞರು ಚರ್ಚಿಸಿ, ಯೋಜನೆ ತಯಾರಿಸಿ ಅಲ್ಲಿಗೆ ಕೈಬಿಟ್ಟಿದ್ದರು. ನಂತರ ವೇದಾವತಿ ನದಿಗೆ ಅಡ್ಡಲಾಗಿ ದೊಡ್ಡ ಜಲಾಶಯ ನಿರ್ಮಿಸಲು ಮೈಸೂರು ಒಡೆಯರ ಸಮ್ಮುಖದಲ್ಲಿ ಚರ್ಚೆ ನಡೆದು ನಂತರ 1855ರಲ್ಲಿ ಮೊದಲ ಬಾರಿಗೆ ಇಲ್ಲಿ ಜಲಾಶಯ ನಿರ್ಮಾಣವಾಗಬೇಕೆಂದು ನಿರ್ಧರಿಸಲಾಯಿತು.[1] 1855–1873ರ ಅವಧಿಯಲ್ಲಿ 45 ರಿಂದ 200 ಅಡಿ ಎತ್ತರದವರೆಗೆ 1,68,000 ರೂ ವೆಚ್ಚದಿಂದ 20,000–00 ರೂ ವೆಚ್ಚದವರೆಗಿನ ಕನಿಷ್ಟ ಯೋಜನೆಗಳು ರೂಪುಗೊಂಡರೂ ಸಹ ಯಾವ ಯೋಜನೆಯನ್ನು ಕೈಗೆತ್ತಿಕೊಳ್ಳಲಿಲ್ಲ ಮತ್ತು 1892ರಲ್ಲಿ ಯೋಜನೆಯಿಂದ ಬಳ್ಳಾರಿ ಜಿಲ್ಲೆಯ ನೀರು ಸರಬರಾಜಿಗೆ ತೊಂದರೆಯಾಗುತ್ತದೆ ಎಂದು ಅಡ್ಡಿಪಡಿಸಿದರೂ ಸೂಕ್ತ ಮನವರಿಕೆಯ ನಂತರ ಒಪ್ಪಿಗೆ ಬಂದಿತು. ಸ್ಥಳ ಪರಿಶೀಲನೆಯಲ್ಲಿ ತಜ್ಞರು ಸ್ಥಳ ಪರೀಕ್ಷೆ ಮಾಡಿ ಜಲಾಶಯ ನಿರ್ಮಾಣ ಮಾಡಲು ಮಾರಿಕಣಿವೆಯ ತಳಪಾಯದ ಕಲ್ಲು ಯೋಗ್ಯವಾಗಿಲ್ಲವೆಂದು, ಇಲ್ಲಿ ಏನ್ನಾದರೂ ಕಟ್ಟಡ ನಿರ್ಮಾಣವಾದರೆ ಅದು ಹೆಚ್ಚು ಕಾಲ ಭದ್ರವಾಗಿ ನಿಲ್ಲುವುದಿಲ್ಲವೆಂದೂ, ನದಿಯ ಮೇಲ್ಭಾಗದಲ್ಲಿ ಹೊಸದುರ್ಗ ತಾಲ್ಲೂಕಿನ ಅತ್ತಿ–ಮೊಗ್ಗೆ ಎಂಬಲ್ಲಿ ಜಲಾಶಯ ನಿರ್ಮಿಸಬಹುದು ಎಂದು ಸಲಹೆ ನೀಡಿದರು. ಆಗ ಸರ್ಕಾರದ ಚೀಪ್ ಇಂಜಿನಿಯರ್ ಕಲೊನೆಲ್ ಮೆಕೆನೀಲ್ ಕ್ಯಾಂಬೆಲ್ ನೇತೃತ್ವದ ಸಮಿತಿ 1898ರಲ್ಲಿ ಮಾರಿಕಣಿವೆ ಪ್ರದೇಶಕ್ಕೆ ಭೇಟಿ ನೀಡಿ ಪರೀಕ್ಷೆ ನಡೆಸಿದ ನಂತರ ಬಂಡೆಯಲ್ಲಿ ರಂಧ್ರವಿದ್ದು ನೀರು ಶೋಧಿಸುವಂತಿದ್ದರೆ ಡ್ಯಾಂಗೆ ಯಾವುದೇ ಅಪಾಯ ಸಂಭವಿಸದು, ಅಲ್ಲದೇ ಎಷ್ಟು ಎತ್ತರಕ್ಕೆ ಬೇಕಾದರೂ ಡ್ಯಾಂ ಕಟ್ಟಬಹುದು ಎಂದು ಸ್ಪಷ್ಟಪಡಿಸಿದರು.

1898ರ ಆಗಸ್ಟ್ ತಿಂಗಳಿನಲ್ಲಿ ದಿವಾನ್ ಶೇಷಾದ್ರಿ ಐಯ್ಯರ್ ಮಾರ್ಗದರ್ಶನದಂತೆ ಚೀಫ್ ಇಂಜಿನಿಯರ್ ಕ್ಯಾಂಬೆಲ್ ಹಾಗೂ ಮೈಸೂರು ಲೋಕೋಪಯೋಗಿ ಇಲಾಖೆಯ ಚುನ್ನಿಲಾಲ್ ತಾರಾಚಂದ್ ದಲಾಲ್‌ರನ್ನು ಯೋಜನೆಯ ಸೂಪರಿಡೆಂಡೆಂಟ್ ಇಂಜಿನಿಯರ್ ಆಗಿ ನೇಮಿಸಿ, ಗುತ್ತಿಗೆದಾರರಿಲ್ಲದೇ ಇಡೀ ಕಾರ್ಯವನ್ನು ಇಲಾಖೆಯವರಿಂದಲೇ ಮಾಡಲು ಸಂಪೂರ್ಣ ಜವಬ್ದಾರಿ ವಹಿಸಿತು. ಮದ್ರಾಸ್ ಅಧಿಪತ್ಯದಲ್ಲಿದ್ದ ಕಡಪ, ಕರ್ನೂಲು ಹಾಗೂ ಪೂನಾ ಸುತ್ತಮುತ್ತಲ ಜಿಲ್ಲೆಗಳಿಂದ ಡ್ಯಾಂ ನಿರ್ಮಾಣಕ್ಕೆ ಐದು ಸಾವಿರ ಕೂಲಿ ಕಾರ್ಮಿಕರನ್ನು ಕರೆ ತರಲಾಯಿತು. ಹೀಗೆ ಸಮುದ್ರಮಟ್ಟದಿಂದ ಸುಮಾರು 6,300 ಅಡಿ ಎತ್ತರವಿರುವ ಬಾಬಾಬುಡನ್‌ಗಿರಿಯಲ್ಲಿ ಹುಟ್ಟುವ ವೇದಾವತಿ ನದಿಗೆ ಅಡ್ಡಲಾಗಿ ಡ್ಯಾಂ ನಿರ್ಮಾಣ ಕಾರ್ಯ ಅಧಿಕೃತವಾಗಿ ಪ್ರಾರಂಭವಾಯಿತು.

1898ರ ನವೆಂಬರ್‌ನಲ್ಲಿ ಈ ಭಾಗದಲ್ಲಿ ಇದ್ದಕ್ಕಿದ್ದಂತೆ ಕಾಲರ ಕಾಣಿಸಿಕೊಂಡಿದ್ದರಿಂದ, ಐದು ಸಾವಿರ ಜನ ಡ್ಯಾಂ ಕೆಲಸವನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕಾಯಿತು. ಅಧಿಕಾರಿಗಳಿಗೆ, ಇಂಜಿನಿಯರ್‌ಗಳಿಗೆ ನಿರ್ಮಿಸಿದ ವಸತಿ ಗೃಹಗಳು, ತನಿಖಾ ಮಂದಿರಗಳು ಕಾಲರಾ ರೋಗದ ಆಸ್ಪತ್ರೆಗಳಾಗಿ ಬದಲಾದವು. ಎಷ್ಟೇ ನಿಗಾವಹಿಸಿದರೂ ಕಾಲರಾಗೆ 350 ಜನ ತುತ್ತಾದರು. ಹಾಗಾಗಿ ಕಾಯಿಲೆಯ ಬಗ್ಗೆ ತೀವ್ರ ನಿಗಾವಹಿಸಿ ಶುದ್ಧ ಕುಡಿಯುವ ನೀರು ಸರಬರಾಜು ಮಾಡಿ, ಕೆಲಸಗಾರರಿಗೆ 100 ಜನ ತಂಡದಂತೆ ವಸತಿ ಸೌಲಭ್ಯ ಕಲ್ಪಿಸಿ ನಂತರ ರೋಗ ನಿಯಂತ್ರಣಕ್ಕೆ ತಂದು ಪುನಃ ಡ್ಯಾಂನ ಕೆಲಸವನ್ನು ಪ್ರಾರಂಭಿಸಲಾಯಿತು. ಐದು ವರ್ಷಕ್ಕೆ ಬದಲು ಒಂಭತ್ತು ವರ್ಷ ಹಿಡಿಯಿತು. ನಂತರ ಡ್ಯಾಂನ ಕೆಲಸ ಪ್ರಾರಂಭವಾಗಿ ಕ್ರಿ.ಶ. 1907ರಲ್ಲಿ ಮುಕ್ತಾಯವಾಯಿತು.[2] ಆಗ ಇದೇ ಸಮಯದಲ್ಲಿ ನೀರಾವರಿ ಚಾನಲುಗಳ ನಿರ್ಮಾಣ ಕಾರ್ಯವು ಪೂರ್ಣಗೊಳ್ಳಲು ಒಂಭತ್ತು ವರ್ಷಕ್ಕೆ ಬದಲಾಗಿ ಹನ್ನೊಂದು ವರ್ಷ ಬೇಕಾಯಿತು.

ಮಾರಿಕಣಿವೆ ಜಲಾಶಯ ನಿರ್ಮಾಣ ಕಾರ್ಯಕ್ಕೆ ಕಾರಣ ಕರ್ತರಾಗಿದ್ದ ದಿವಾನ್ ಶೇಷಾದ್ರಿ ಅಯ್ಯರ್‌ರವರು ಪೂರ್ಣಗೊಂಡ ಜಲಾಶಯ ನೋಡುವ ಮೊದಲೇ ಅವರು 1901 ಸೆಪ್ಟೆಂಬರ್ ತಿಂಗಳಲ್ಲಿ ಮರಣವನ್ನಪ್ಪಿದರು. ಅಲ್ಲದೆ ಚೀಫ್ ಇಂಜಿನಿಯರ್ ಆಗಿದ್ದ ಕ್ಯಾಂಬೆಲ್ ನಿವೃತ್ತರಾದರು. ಯೋಜನೆಯ ಸೂಪರ್‌ಡೆಂಟೆಂಡ್ ಇಂಜಿನಿಯರ್ ಆಗಿದ್ದ ಸಿ.ಟಿ. ದಲಾಲರು 1905ರಲ್ಲಿ ಚೀಫ್ ಇಂಜಿನಿಯರ್ ಆಗಿ ಬಡ್ತಿ ಪಡೆದು ಬರೋಡ ರಾಜ್ಯಕ್ಕೆ ಹೋದರು. 1905 ಮೇ ತಿಂಗಳಿನಿಂದ ಯೋಜನೆ ಪೂರ್ಣಗೊಳ್ಳುವವರೆಗೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ನೇಮಕಗೊಂಡ ಎಚ್.ಡಿ.ರೈಸ್‌ರವರು ಈ ಯೋಜನೆಯನ್ನು ಮುಂದುವರೆಸಿದರು.

ಸುಂದರ ಡ್ಯಾಂನ ನಿರ್ಮಾಣಕ್ಕೆ ಆಗಿರುವ ಖರ್ಚು ನೋಡಿದರೆ ಯಾರಿಗಾದರೂ ಆಶ್ಚರ್ಯವಾಗುತ್ತದೆ. ಯೋಜನಾ ಪೂರ್ವ ವೆಚ್ಚ, ಹಂಗಾಮಿ ಕಟ್ಟಡಗಳು, 3 ಚಾನೆಲ್, ಸುಮಾರು 30 ಮೈಲಿ ಉದ್ದದ ಬಲನಾಲೆಗಳು, 32 ಸೇತುವೆಗಳು, 60 ತೂಬುಗಳು, 20 ನೀರು ವಿತ್ತರಿಸುವ ತೊಟ್ಟಿಗಳು, ಮದ್ದೇರು ಹಳ್ಳದ ಹತ್ತಿರ 3000 ಅಡಿ ಉದ್ದದ 77 ಕಣ್ಣುಗಳಿರುವ ಸೇತುವೆ ನಿರ್ಮಾಣ, ಆರೋಗ್ಯ ಪಾಲನೆ, ಸಿಬ್ಬಂದಿ ವೆಚ್ಚ, ಪರಿಹಾರದ ಧನ, ಉಪಕರಣ ಸಾಮಗ್ರಿಗಳು ಇತ್ಯಾದಿ ಎಲ್ಲಾ ಸೇರಿ 44,67,211

ರೂ ಖರ್ಚಾಗಿದೆ. ಇದರಲ್ಲಿ ಜಲಾಶಯಕ್ಕೆಂದು 18,30,472 ರೂಪಾಯಿ ಮಾತ್ರ ಖರ್ಚಾಗಿದೆ.[3] ಈಗ ವಿಶ್ವಬ್ಯಾಂಕ್‌ನಿಂದ ಕೋಟಿಗಟ್ಟಲೆ ಹಣ ಬಂದಿದ್ದರೂ ನಾಲೆಗಳ ರಿಪೇರಿಯನ್ನು ಸರಿಯಾಗಿ ಮಾಡಲಾಗಿಲ್ಲ. ಸ್ಥಳೀಯವಾಗಿ ಸಿಗುತ್ತಿದ್ದ ಮರಳು, ಸುಣ್ಣದಕಲ್ಲು, ಕಾರ್ಬೋನಿಕ್ ಆ್ಯನ್ ಹೈಡ್ರೇಡ್, ಕ್ಷಾರ ಮೊದಲಾದ ಮಿಶ್ರಣದಿಂದ ಅಣೆಕಟ್ಟು ನಿರ್ಮಾಣವಾಗಿದ್ದು, ಒಂದು ನೂರು ವರ್ಷ ಮುಗಿಯುತ್ತ ಬಂದಿದ್ದರೂ ಒಂದೇ ಒಂದು ಹನಿ ನೀರು ಸೋರದಷ್ಟು ಎಂತಹ ಒತ್ತಡವನ್ನು ಬೇಕಾದರೂ ತಡೆಯಬಲ್ಲ ಶಕ್ತಿಯನ್ನು ಈ ಅಣೆಕಟ್ಟು ಹೊಂದಿದೆ.

1907ರಲ್ಲಿ ಮಾರಿಕಣಿವೆ ಅಣೆಕಟ್ಟು ನಿರ್ಮಾಣವಾದಾಗ ಭಾರತದಲ್ಲಿ ಅತಿದೊಡ್ಡ ಅಣೆಕಟ್ಟು ಎಂಬ ಪ್ರಸಿದ್ಧತೆ ಪಡೆದಿತ್ತು. ಏಷ್ಯಾದಲ್ಲಿಯೇ ಅತಿದೊಡ್ಡ ವಾಣಿವಿಲಾಸ ಸಾಗರವೆಂದು ಹೆಸರಾಗಿ ಆ ಕಾಲಕ್ಕೆ ಭಾರತದ ಅತಿ ದೊಡ್ಡ ಅಣೆಕಟ್ಟು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನದು ಎಂಬ ಹೆಮ್ಮೆಯ ಸಂಗತಿಯಾಗಿದೆ. ಈ ಡ್ಯಾಂನ ಉದ್ದ 1330 ಅಡಿಗಳು ಎತ್ತರ 140 ಅಡಿಗಳು, ತಳಪಾಯದ ಅಗಲ 150 ಅಡಿ, ನೀರಿನ ಗರಿಷ್ಟ ಮಟ್ಟ 130 ಅಡಿಗಳು, ಡ್ಯಾಂಗೆ ಸಂಬಂಧಿಸಿದ ಜಲಾನಯನ ಪ್ರದೇಶದ ವಿಸ್ತೀರ್ಣ 600 ಚದುರ ಮೈಲಿಗಳು, ಈ ಜಲಾಶಯದಿಂದ 25 ಸಾವಿರ ಎಕರೆ ಭೂಮಿಗೆ ನೀರಿನ ಸೌಕರ್ಯ ಒದಗುತ್ತಿದೆ. ಈ ಜಲಾಶಯದ ವ್ಯಾಪ್ತಿಗೆ ಸೇರಿದ ಗ್ರಾಮಗಳ ಸಂಖ್ಯೆ ಸುಮಾರು 40. ಈ ಎರಡು ಬೆಟ್ಟಗುಡ್ಡಗಳ ನಡುವೆ ನಿರ್ಮಿಸಲಾಗಿರುವ ಈ ಡ್ಯಾಂ ಒಂದು ಸುಂದರ ಸರೋವರದಂತೆ ಕಾಣಿಸಿ ಎಲ್ಲರ ಗಮನ ಸೆಳೆಯುತ್ತದೆ. ಎರಡು ಗುಡ್ಡದಲ್ಲಿರುವ ಕಲಾತ್ಮಕ ಸುಂದರ ಮಂಟಪಗಳು ಪ್ರವೇಶದ್ವಾರದ ಮಂಟಪದ ಬಳಿ ನಿಂತು ಕೂಗಿದರೆ ಆ ನಿರ್ಧಿಷ್ಟ ಸ್ಥಳದಲ್ಲಿ ಮಾರ್ದನಿ ಕೇಳಿಬರುವಂತ್ತಿತ್ತು.[4]

**ನೀರಿನ ಸಂಗ್ರಹ**

ಜಲಾಶಯದ ಮೇಲ್ಭಾಗದಲ್ಲಿ 88 ದೊಡ್ಡ, 880 ಸಣ್ಣ ಕೆರೆಗಳಿದ್ದು, ಬಾಬಾಬುಡನ್‌ಗಿರಿಯಲ್ಲಿ ವಾರ್ಷಿಕ 150 ಇಂಚು ಮಳೆಯಾದರೆ ಡ್ಯಾಂನ ವ್ಯಾಪ್ತಿಯ 10 ಮಳೆಯ ಮಾಪನ ಕೇಂದ್ರಗಳಲ್ಲಿ ವಾರ್ಷಿಕ ಮಳೆಯ ಪ್ರಮಾಣ ಕೇವಲ 24 ಇಂಚಿನಷ್ಟು ಮಾತ್ರ 1902 ಹಾಗೂ 1903 ರಲ್ಲಿ ಈ ವ್ಯಾಪ್ತಿಯ ಪ್ರದೇಶದಲ್ಲಿ ವ್ಯಾಪಕ ಮಳೆಯಾದ ಕಾರಣ 30 ಸಾವಿರ ಕ್ಯೂಸೆಕ್ ಅಡಿ ನೀರು ಬಂದರೂ ಅದೆಲ್ಲಾ ನದಿಯಲ್ಲಿ ಹರಿದು ಹೋಯಿತು. ಪುನಃ 1906 ರಲ್ಲಿ 110.60 ಅಡಿ ನೀರು ಸಂಗ್ರಹವಾಗಿ 20 ಚದುರ ಮೈಲಿ ವಿಸ್ತೀರ್ಣದಲ್ಲಿ ನೀರು ಹರಡಿತು. ಆ ವರ್ಷ ಮೊದಲ ಬಾರಿಗೆ ನೀರಾವರಿಗೆಂದು ನಾಲೆಯ ಮೂಲಕ ನೀರು ಹರಿಸಲಾಯಿತಾದರೂ 1909ರಲ್ಲಿ ಪೂರ್ಣ 25 ಸಾವಿರ ಎಕರೆಗಾಗುವಷ್ಟು ನೀರು ಸಂಗ್ರಹವಾಯಿತು. ಆದರೆ ನೀರಾವರಿಗೆ 14 ಸಾವಿರ ಎಕರೆ ಮಾತ್ರ ಯೋಗ್ಯವಾಗಿತ್ತು. ಉಳಿದ 11 ಸಾವಿರ ಎಕರೆ ಭೂಮಿಯನ್ನು ದೋಚಿದಂತೆ ಹಂಚಲಾಯಿತು. ಇಂದು 2008–09ರಲ್ಲಿ ನೀರಿನ ಸಂಗ್ರಹಣೆಯ ಪ್ರಮಾಣ ಕಡಿಮೆಯಾಗಿದೆ. ಚೆಕ್‌ಡ್ಯಾಂಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಅಣೆಕಟ್ಟಿನಲ್ಲಿ ನೀರಿನ ಸಂಗ್ರಹದ ಪ್ರಮಾಣ ಕಡಿಮೆಯಾಗಿ ವರ್ಷಕ್ಕೆ ಒಂದು ಬಾರಿ ಮಾತ್ರ ನೀರನ್ನು ಹೊಲಗಳಿಗೆ ಒದಗಿಸಲಾಯಿತು. ಡ್ಯಾಂನ ನಿರ್ಮಾಣದಲ್ಲಿ ಕಾರ್ಯ ನಿರ್ವಹಿಸಿದವರಿಗೆ ಭೂಮಿಯನ್ನು ಹಂಚುವಾಗ ಪ್ರತಿ ಕುಟುಂಬಕ್ಕೆ

ಐದು ಎಕರೆಯಂತೆ ಭೂಮಿಯನ್ನು ಉಚಿತವಾಗಿ ಹಂಚಲಾಯಿತು. ಸ್ಥಳೀಯವಾಗಿ ಬದುಕು ಸಾಗಿಸಲು ಇಚ್ಛಿಸಿದ ಲಂಬಾಣಿ ಜನರಿಗೆ ಮತ್ತು ಮರಾಠಿಗರಿಗೆ, ತಮಿಳು ಜನರಿಗೆ ಇದರ ಪ್ರತಿಫಲ ದೊರಕಿತು.

**ಚೀಫ್ ಇಂಜಿನಿಯರ್ ಆಗಿ ಸರ್.ಎಂ.ವಿಶ್ವೇಶ್ವರಯ್ಯನವರ ಆಗಮನ**

ಮುಂಬೈನ ಲೋಕೋಪಯೋಗಿ ಇಲಾಖೆಯಲ್ಲಿ ಸೂಪರಿಡೆಮಟ್ ಇಂಜಿನಿಯರ್ ಆಗಿ ಸೇವೆಯಲ್ಲಿದ್ದ ಸರ್.ಎಂ.ವಿಶ್ವೇಶ್ವರಯ್ಯನವರು 1909 ನವೆಂಬರ್ 15 ರಂದು ಮೈಸೂರಿನ ಚೀಫ್ ಇಂಜಿನಿಯರ್ ಆಗಿ ನೇಮಕಗೊಂಡ ನಂತರ ಮಾರಿಕಣಿವೆ ಕೆರೆಯ ಭವಿಷ್ಯದ ಮುಂದಾಲೋಚನೆ ನಡೆಯಿತು. 1902 ರಿಂದ 1909 ರವರೆಗೆ ಈ ಡ್ಯಾಂಗೆ ಹರಿದು ಬಂದ ನೀರಿನ ಪ್ರಮಾಣವನ್ನು ಅಂದಾಜು ಮಾಡಿ ಪ್ರತಿವರ್ಷ ಈ ಜಲಾಶಯ ತುಂಬುವ ಸಾಧ್ಯತೆ ಇದೆ. ಇಲ್ಲಿ ಇದರಿಂದ ನಿಗಧಿತ ಪ್ರದೇಶದ ಉದ್ದೇಶ ಈಡೇರುವುದಿಲ್ಲ ಎಂದು ಭಾವಿಸಿ, ವೇದಾವತಿ ನದಿ ಹುಟ್ಟುವ ಬಾಬಬುಡನ್‌ಗಿರಿಯಲ್ಲೇ ಜನ್ಮತಾಳುವ ಯುಗಚಿ ನದಿಯನ್ನು ಮಳೆಗಾಲದಲ್ಲಿ ಮಾತ್ರ ವೇದಾವತಿ ನದಿಗೆ ಜೋಡಿಸಿದರೆ ಅತ್ಯಂತ ಕಡಿಮೆ ಖರ್ಚಿನಲ್ಲಿ ಪ್ರತಿವರ್ಷ 2000 ದಿಂದ 3000 ಮಿಲಿಯನ್ ಕ್ಯೂಸೆಕ್ ಅಡಿ ನೀರನ್ನು ಹೆಚ್ಚುವರಿಯಾಗಿ ಪಡೆಯಬಹುದು. ಇದರಿಂದ ಮಾರಿಕಣಿವೆಯಲ್ಲಿ ವಿದ್ಯುತ್ ಉತ್ಪಾದನೆ ಮಾಡುವುದರ ಜೊತೆಗೆ ಹೆಚ್ಚು ಭೂಮಿಗೆ ನೀರು ಹರಿಸಬಹುದು ಎಂದು ಮುಂದಾಲೋಚನೆ ಮಾಡಿದರು.

1898ರಲ್ಲಿ ಡ್ಯಾಂ ನಿರ್ಮಾಣದ ಪ್ರಾರಂಭದಲ್ಲಿ ಕಾಲರ ರೋಗಕ್ಕೆ 350 ಜನ ಬಲಿಯಾದರೆ, ಡ್ಯಾಂ ನಿರ್ಮಾಣದ ಸಮಯದಲ್ಲಿ ಸಿಡಿಮದ್ದು ಸಿಡಿದು, ಬಂಡೆ ಮೇಲೆ ಬಿದ್ದು ಇತ್ಯಾದಿ ಕಾರಣಗಳಿಗಾಗಿ ಆರು ಮಹಿಳೆಯರು ಸೇರಿದಂತೆ ಒಟ್ಟು 15 ಜನ ಪ್ರಾಣ ತ್ಯಾಗ ಮಾಡಿದರು. ಆದರೆ ಇಲ್ಲಿ ಅತ್ಯಂತ ಆಶ್ಚರ್ಯದ ವಿಷಯವೇನೆಂದರೆ ಜಲಾಶಯ ನಿರ್ಮಾಣದಲ್ಲಿ ಸ್ಥಳೀಯ ಕೆಲಸಗಾರರು ತೊಡಗದೇ ಇದ್ದದ್ದು 1909ರಲ್ಲಿ ಮಾತ್ರ ಆರ್ಥಿಕವಾಗಿ ತೀರಾ ಹಿಂದುಳಿದ ಕೆಲವರು ಚಾನೆಲ್‌ಗೆ ಗುಂಡಿ ತೋಡಲು ಅವಕಾಶ ಕೋರಿದ್ದರು.[5]

**ಸುಂದರ ಪ್ರವಾಸಿ ತಾಣವಾಗಿ ವಾಣಿವಿಲಾಸ ಜಲಾಶಯ**

ಪೂನಾ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಿಂದ ಕೇವಲ 18 ಕಿ.ಮೀ ದೂರವಿರುವ ಈ ಜಲಾಶಯವು ಸುಂದರ ಪ್ರವಾಸಿ ತಾಣವಾಗಿದೆ. ರೈಸ್‌ರವರು ತಮ್ಮ ವರದಿಯಲ್ಲಿ ಈ ಜಲಾಶಯದಲ್ಲಿ ಅನೇಕ ನಮೂನೆಯ ಮೀನುಗಳಿವೆ, ಹಂಸಗಳಿವೆ ಹಾಗೂ ಇಲ್ಲಿನ ಬೆಟ್ಟ ಹಾಗೂ ಚಿಕ್ಕ ಕಾಡುಗಳು ಚಿರತೆ, ಜಿಂಕೆ, ಕರಡಿ, ಕಾಡು ಹಂದಿಗಳಿಗೆ ಉತ್ತಮ ವಾಸಸ್ಥಳಗಳಾಗಿವೆ. ಬೆಟ್ಟದಲ್ಲಿ ಗಿಡಗಳನ್ನು ನೋಡಿದರೆ ಹೆಚ್ಚು ಹಸಿರು ಕಂಡುಬರುತ್ತದೆ ಎಂದಿದ್ದಾರೆ. ಅರಣ್ಯ ಇಲಾಖೆಯವರು ಈ ಜಲಾಶಯ ನೋಡಲು ಹಾಗೂ ಇಲ್ಲಿನ ದೇವಿಯ ದರ್ಶನಕ್ಕೆ ಬರುವವರಿಗೆ ವಿಶ್ರಾಂತಿ ಪಡೆಯಲು, ಅನೇಕ ವಿಧದ ಗಿಡಮರಗಳನ್ನು ಬೆಳೆಸಲಾಗಿದೆ. ಅಲ್ಲದೆ ಸುಂದರವಾದ ಉದ್ಯಾನವನವನ್ನು ನಿರ್ಮಿಸಿ ಅಚ್ಚುಕಟ್ಟಾಗಿ ಸಾಲು–ಸಾಲುಗಳಂತೆ ಮಾಡಿ ಸಸಿಗಳನ್ನು ನೆಡೆಸಿದ್ದಾರೆ. ಈ ಉದ್ಯಾನದಲ್ಲಿ ಸ್ತ್ರೀಯು ಕೊಡದಿಂದ ಭೂಮಿಯ ಮೇಲೆ ನೀರನ್ನು ಚೆಲ್ಲುತ್ತಿರುವ ದೃಶ್ಯದ ಶಿಲ್ಪವಿದೆ. ಅಲ್ಲದೇ ವಿಶ್ರಾಂತಿಗಾಗಿ ಇಲ್ಲಿ ಅಲ್ಲಲ್ಲಿ ತಂಗುದಾಣಗಳನ್ನು ನಿರ್ಮಿಸಲಾಗಿದೆ. ಉಯ್ಯಾಲೆ, ಜಾರುಬಂಡೆ ಇನ್ನಿತರ ಆಟದ ಸಾಮಗ್ರಿಗಳನ್ನು ಅತ್ಯುತ್ತಮವಾಗಿ ಅಲ್ಲಲ್ಲಿ

ಜೋಡಿಸಲಾಗಿದೆ. ಉದ್ಯಾನದ ಒಂದು ಕಡೆ ಮಾದರಿ ಗ್ರಾಮವನ್ನು ನಿರ್ಮಿಸಲಾಗಿದೆ. ಇದರಲ್ಲಿ ಚಿಕ್ಕ–ಚಿಕ್ಕ ಸಾಲು ಮನೆಗಳು, ದೇವಸ್ಥಾನಗಳು, ಪ್ರಾಣಿ–ಪಕ್ಷಿಗಳ ಸಂಕುಲನವು ಅದ್ಭುತವಾಗಿದೆ. ನೀರಿನ ವ್ಯವಸ್ಥೆಯು ಅತ್ಯುತ್ತಮವಾಗಿ ಪ್ರವಾಸಿಗರು ಉಳಿದುಕೊಳ್ಳಲು ಹಾಗೂ ಮದುವೆ ಇನ್ನಿತರ ನಿರ್ಮಾಣ ಕಾರ್ಯಗಳನ್ನು ನಡೆಸಲು ಗೃಹಗಳನ್ನು ಸರ್ಕಾರದ ವತಿಯಿಂದ ನಿರ್ಮಿಸಿ ಅನುಕೂಲ ಮಾಡಿಕೊಡಲಾಗಿದೆ.[6]

**ಬೃಂದಾವನದ ನಿರ್ಮಾಣದ ವಿಫಲತೆ**

ಮೈಸೂರಿನ ಕೆ.ಆರ್.ಎಸ್ ಅಣೆಕಟ್ಟೆಯ ಕೆಳಭಾಗದಲ್ಲಿ ನಿರ್ಮಿಸಿರುವ ಬೃಂದಾವನದ ಮಾದರಿಯನ್ನೇ ವಾಣಿವಿಲಾಸ ಜಲಾಶಯದಲ್ಲೂ ನಿರ್ಮಿಸಲು ಯೋಚನೆ ಮಾಡಲಾಗಿತ್ತು. ಅಂದಿನ ಪ್ರವಾಸೋದ್ಯಮ ಸಚಿವರಾಗಿದ್ದ ಮಂತ್ರಿ ಮಂಡಲದಲ್ಲಿ ಶ್ರೀ.ಎಸ್.ಬಂಗಾರಪ್ಪನವರು ಹಾಗೂ ಗಣ್ಯ ಅಧಿಕಾರಿಗಳು ಈ ಬಗ್ಗೆ ಚಿಂತಿಸಿದ್ದರು. ಆದರೆ ಈ ಜಲಾಶಯದಲ್ಲಿ ಆಗ ನೀರಿಲ್ಲದ ಕಾರಣ ಸಾರ್ವಜನಿಕರು ನಿರಾಸಕ್ತಿ ತೋರಿದ್ದರಿಂದ ಬೃಂದಾವನ ನಿರ್ಮಾಣವಾಗಲಿಲ್ಲ.

ಈ ಡ್ಯಾಂನ ಉತ್ತರದ ಮಂಟಪದ ಬಳಿ ಮೂಲ ಸೌಕರ್ಯಗಳಿರುವ ಪ್ರವಾಸಿ ಮಂದಿರವಿದೆ. ದಕ್ಷಿಣದ ಪ್ರವೇಶ ಮಂಟಪದಲ್ಲಿ ಈ ಸಾಗರದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿಸುವ ಶಿಲಾಶಾಸನವಿದೆ.[7] ಈ ಶಾಸನದಲ್ಲಿ ವಾಣಿವಿಲಾಸ ಸಾಗರಕ್ಕೆ ಮೊದಲು **'ಕೃಷ್ಣ** ರಾಜಸಮುದ್ರ**'** ಎಂದು ಹೆಸರಿಡಲಾಗಿತ್ತೆಂಬ ಅಂಶವು ತಿಳಿಯುತ್ತದೆ. ಹಾಗೆಯೇ ಶ್ರೀವಾಣಿವಿಲಾಸ ಸನ್ನಿಧಾನದವರ ಆಳ್ವಿಕೆಯಲ್ಲಿ ಆರಂಭಿಸಲ್ಪಟ್ಟ ನಾಲ್ವಡಿ ಕೃಷ್ಣರಾಜ ಒಡೆಯರವರ ಪ್ರೋತ್ಸಾಹ ಬಲದಿಂದ ವಾಸ್ತು ವಿದ್ಯಾವಿಶಾರದರಾದ ಚನ್ನಿಲಾಲ್ ತಾರಚಂದ್ ದಲಾಲ್ ಎಂಬುವವರಿಂದ ಮಾರಿಕಣಿವೆಯೆಂಬ ಈ ಮಹಾತಟಾಕವು ಪೂರೈಸಲ್ಪಟ್ಟು ಕೃಷ್ಣ ರಾಜಸಮುದ್ರ ಎಂದು ಹೆಸರು ಪಡೆದಿದ್ದು, ಈ ಜಲಾಶಯ ಪ್ರಜೆಗಳ ಉಪಯೋಗಕ್ಕಾಗಿರುತ್ತದೆಂಬುದು ಈ ಶಾಸನದ ಸಾರಾಂಶವಾಗಿರುತ್ತದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ವಾಣಿವಿಲಾಸ ಜಲಾಶಯವು ಸುಂದರ ಪ್ರವಾಸಿ ಕೇಂದ್ರವಾಗಿ, ಸಾಹಸ ಜಲಕ್ರೀಡೆ ಸ್ಥಳವಾಗಿದೆ. ಸೋರ್ಯೋದಯ ಮತ್ತು ಸೂರ್ಯಾಸ್ತಮದ ದೃಶ್ಯಗಳು ಬಹಳ ಮನೋಹರವಾಗಿ ಬಹಳಷ್ಟು ಪ್ರವಾಸಿಗರನ್ನು ಆಕರ್ಷಿಸುತ್ತದೆ. 'Green Paradise in Hot Rock Town' ಎಂಬ ಪ್ರಶಂಸೆಗೆ ಪಾತ್ರವಾಗಿದೆ.

**ಕೊನೆಟಿಪ್ಪಣಿ**

[1] *ವಿದ್ಯಾಶ್ರೀ.ಎಸ್.ಹೆಚ್. (2010). ಹಿರಿಯೂರು ತಾಲ್ಲೂಕು ದೇವಾಲಯಗಳು ಮತ್ತು ಐತಿಹಾಸಿಕ ಸ್ಥಳಗಳು. ಶ್ರೀಲಕ್ಷ್ಮಿ ಪ್ರಕಾಶನ, ಹಿರಿಯೂರು. ಪು.ಸಂ.99*

[2] *ರಂಗಸ್ವಾಮಿ, ಡಿ.ಟಿ. (2012). ಚಿತ್ರದುರ್ಗ ಜಿಲ್ಲಾ ದೇವಾಲಯ ದರ್ಶಿನಿ, ಗಾಯಿತ್ರಿ ಪ್ರಕಾಶನ, ಚಿತ್ರದುರ್ಗ, ಪು.138–139*

[3] *ವಿದ್ಯಾಶ್ರೀ.ಎಸ್.ಹೆಚ್. (2010). ಪೂರ್ವೋಕ್ತ., ಪು.ಸಂ. 102*

[4] *ಶೈಲಜಾ, ಓ.ಎಸ್. (2015). ಪ್ರವಾಸಕ್ಕೊಂದು ಕೈಪಿಡಿ. ಗಿರಿ ಶೈಲ ಪ್ರಕಾಶನ, ದಾವಣಗೆರೆ. ಪು.ಸಂ. 75–76*

[5] *ಸೂರ್ಯನಾಥ ಕಾಮತ್. (1984). ಕರ್ನಾಟಕ ರಾಜ್ಯ ಗೆಜೆಟಿಯರ್–ಭಾಗ 1 ಕರ್ನಾಟಕ ಸರ್ಕಾರ, ಬೆಂಗಳೂರು.*

[6] *ಕ್ಷೇತ್ರಕಾರ್ಯ: ಮಾರಿಕಣಿವೆ, ದಿನಾಂಕ 16–08–2019*

[7] *ಎಫಿಗ್ರಾಫಿಯ ಕರ್ನಾಟಕ ಸಂಪುಟ–ಫಿಖ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.*

**ಪರಾಮರ್ಶನ ಗ್ರಂಥ**


- ಗಿರಿಜ.ಟಿ (1997). ಚಿತ್ರದುರ್ಗ ಜಿಲ್ಲಾದರ್ಶಿನಿ. ರೇಖಾ ಪ್ರಕಾಶನ, ದಾವಣಗೆರೆ.